ದಿನ ಪತ್ರಿಕೆ

Reg No. M 1209

Daily & Weekly

For All Kinds of Printing & Binding

The Satyavadi Press

SATYAVADI—Oldest Newspaper of Mysore

ಸತ್ಯವಾದಿ

ಸಂಪುಟ 26 ಸಂಚಿಕೆ 318] ಮಂಗಳವಾರ 22—6—1943 [3 ಪೈ

ಹೆಚ್. ಆರ್. ಜಿ. ಸಿ. ಯವರ

ಶ್ರೀ ವಿ ಕ ರ್

ರ ಯ ಾ ರಿ ಕೆ

ವಾ ಣಿ OR

[Violinist]

ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗನೆ ಬರಲಿದೆ

ಬಿ ಸಿ ಬಿ ಸಿ

ಸುದ್ದಿಗಳು

ನೇಪಲ್ಸ್ ಮತ್ತು ಸಿಸಲಿಯ ಅನೇಕ ಊರುಗಳನ್ನು ಜುಲೈ 10 ರೊಳಗಾಗಿ ಇಟಲಿಯವರು ಖಾಲಿಮಾಡಬೇಕೆಂದು ಸರ್ಕಾರಿ ಆಜ್ಞೆಯಾಗಿದೆಯೆಂದು ತುರ್ಕಿಯಿಂದ ತಂತೀವಾರ್ತೆ ಬಂದಿದೆ.

ಂ ಂ

ಜನವರಿ 15 ರಲ್ಲಿ ಡಂಡಂ ರೈಲ್ವೇ ಸ್ಟೇಷನ್ನಿನಲ್ಲಿ ನಡೆದ ರೈಲ್ವೆ ಅನಾಹುತಕ್ಕೆ ಡೈವರೇ ಹೊಣೆಗಾರನೆಂದು 6 ತಿಂಗ ಕಠಿಣ ಸಜಾ ವಿಧಿಸಲಾಗಿದೆ.

ಂ ಂ

ಈಗ ಯೂರೋಪಿನ ಮೇಲೆ ದಂಡಿಯಾತ್ರೆ ಹೋಗುವ 'ಇಕ್ವೇಷ್ಟ್ರಿಯನ್ ಸೈನ್ಸ' ಯವರು ಸಿರಿನ್ಸ ಮೇಲೂ, ಭೂಮಿಯ ಮೇಲೂ ಯುದ್ಧಮಾಡುವ ರೀತಿಯಲ್ಲಿ ಅಮೆರಿಕನ್ನರು ತಮ್ಮ ಸೇನೆಗಳನ್ನು ತರಬೇತು ಮಾಡುತ್ತಿರುವರು.

ಂ ಂ

ಜರ್ಮನಿಯ ಸೇನೆಯಲ್ಲಿ ಜನರು ಕಮ್ಮಿಯಾಗುತ್ತಿರುವದರಿಂದ ಆರ್ಯರಲ್ಲದ ಪೋಲ್ ಕ್ರೋಟ್ಸ್ ಮುಂತಾದವರನ್ನು ಹಿಟ್ಲರು ಸೇನೆಗೆ ಸೇರಿಸಿಕೊಳ್ಳುತ್ತಿರುವನು.

ಂ ಂ

ತಾ|| 17ರಲ್ಲಿ ತಿನ್ನವೆಲ್ಲಿಯಲ್ಲಿ ರಥೋತ್ಸವದಲ್ಲಿ ರಥವನ್ನು ಸ್ವಲ್ಪದೂರು ಳೆದಾಗ ಆ ರಥದಲ್ಲಿ ಕಾಂಗ್ರೆಸ್ ಬಾವುಟವಿದ್ದುದನ್ನು ಅಧಿಕಾರಿಗಳು ನೋಡಿ ತೆಗೆದರು. ಜನರು ರಥವನ್ನೆಳೆಯಲಿ ಸಿಲ್ಲಿಸಿದರು. 24 ಗಂಟೆಯಾದ ಮೇಲೆ ಸರ್ಕಾರದವರು ರಥವನ್ನೆಳೆಯಬೇಕೆಂದು ಬೀಡಿದ್ದರ ಮೇಲೆ, ರಾಷ್ಟ್ರಧ್ವಜವಿಲ್ಲದೇ ರಥವನ್ನು ನಡೆಸಿದರು

ಂ ಂ

ಭಾರತದ ಹೊಸ ಮುಖ್ಯ ಸೇನಾಪತಿಯಾದ ಸರ್ ಕ್ಲಾಡ್ ಆರ್ಚಿಬಾಲ್ಡ್ ಅವರು 19—6—43 ರಲ್ಲಿ ತಮ್ಮ ಹುದ್ದೇ ಮೇಲೆ ಹಾಜರಾದರು.

ಈಗಿನ ಯುದ್ಧದಿಂದ ಅಮೇರಿಕಾ ಸೇನೆಯಲ್ಲಿ ನಷ್ಟ 89503 ಎಂದೂ ಇವರ ಹತ್ತಿರ ಸಂಬಂಧಸ್ಥರಿಗೆಲ್ಲಾ ಈ ವಿಷಯ ತಿಳಿಸಲಾಗಿದೆಯೆಂದೂ ಪ್ರಕಟವಾಗಿದೆ ಇದರಲ್ಲಿ ಸತ್ತವರು 15 ಸಾವಿರ ಗಾಯಗೊಂಡವರು 21 ಸಾವಿರ, ಪತ್ತೆ ಇಲ್ಲದವರು 32 ಸಾವಿರ, ಯುದ್ಧ ಖೈದಿಯಾಗಿರುವವರು 20 ಸಾವಿರ.

ಂ ಂ

ಮುಂದೆ ವೈಸರಾಯರಾಗುವ ಫೀಲ್ಡ್ ಮಾರ್ಷಲ್ ವೇವಲರು ಕಳೆದ ಸೋಮವಾರದಿಂದ ಇಂಡಿಯಾ ಆಫೀಸಿನಲ್ಲಿ ಕೆಲಸ ಮಾಡುತ್ತಿರುವರು,

ಂ ಂ

ಪಿಡತೆಗಳ ಸಂಗಡ 5 ವರ್ಷ ಕಾಲ ಯುದ್ಧ ಹೂಡಿ ಅವನ್ನು ನಿರ್ಮೂಲ ಮಾಡಲು ಕರಾಚಿ ಸರಕಾರದವರು 7ವರೆ ಲಕ್ಷ ರೂಪಾಯಿ ಮಂಜೂರ್ಮಾಡಿರುವರು. ಭಾರತದಲ್ಲಿ ಮಿಡತೆ ಯುದ್ಧಕ್ಕೆ ದ್ರವ್ಯ ಖರ್ಚು ಮಾಡುವುದು ಇದೇ ಮೊದಲು.

ಂ ಂ

ನಿನ್ನೆ ದಿವಸ ಸಾಲುಸಾಲಾಗಿ ಮಿತ್ರರ ವಿಮಾನಗಳು ಹೋಗುತ್ತಿದ್ದುದನ್ನು ಡೋವರ್ ಪ್ರಜೆಗಳು ಬೀದಿಯಲ್ಲಿ ನಿಂತು ನೋಡುತ್ತಿದ್ದರು. ಎಲ್ಲಿಗೆ ಎನ್ನುವುದು ಇನ್ನೂ ಯಾರಿಗೂ ತಿಳಿಯದು.

ಂ ಂ

ಸಿಂಧಿನಲ್ಲಿ ಮಿ || ಜಿನ್ನಾರವರು ಒಂದು ಮುಸ್ಲಿಂ ಕಾಲೇಜಿನ ಶಂಕುಸ್ಥಾಪನೆ ಮಾಡಿದರು, ಇದಕ್ಕೆ ಅವರು 5 ಸಾವಿರ ರೂಪಾಯಿ ದಾನಾ ಮಾಡಿದರು, ಇತರರು 62 ಸಾವಿನ ರೂ. ಗಳನ್ನು ಕೊಡಲು ವಾಗ್ದಾನ ಮಾಡಿರುವರು.

ಂ ಂ

ಕಳೆದ ಭಾನುವಾರ ರಾತ್ರಿಯಿಂದ ಅಮೇರಿಕಾದಲ್ಲಿ ಉಕ್ಕಿನ ಕೆಲಸದ ಅರ್ಧ ಮಿಲಿಯ ಕೆಲಸಗಾರರು ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿರುವರು.

ವಿಶೇಷ ವರ್ತಮಾನ

ಮಿತ್ರರ ವಿಮಾನಗಳು ಸಿನ್ನೆ ಹಾಲೆಂಡಿನ ಮೇಲೆ ಧಾಳಿ ಮಾಡಿದವು.

ಂ ಂ

ಚಕ್ರವರ್ತಿಗಳು ಟುನಿಷಿಯಾದಿಂದ ಮಾಲ್ಟಾಕ್ಕೂ ಭೇಟಿ ಕೊಡುವ ಸಂಭವವುಂಟು.

ಂ ಂ

ಚೈನಾದಲ್ಲಿ ಚೀಣೀಯರು ಪ್ರತಿದಿನವೂ ಜಪಾನಿಯರನ್ನು ಓಡಿಸುತ್ತಾ, ತಾವು ಮುನ್ನುಗ್ಗುತ್ತಿರುವರು. ಯಾಂಗಟೇಸ್ ನದಿಯ ತೀರದಲ್ಲಿ ಕುರ್ಗಸ್ ಕ್ಷೇತ್ರದಲ್ಲಿ ಕೆಲವು ಸ್ಥಳಗಳನ್ನು ಹಿಡಿದು ಕೊಂಡಿರುವರು.

ಂ ಂ

"ಬೆಲ್ಜಿಯಮ್ಮಿನ" ಕೂಲಿಗಾರರೆಲ್ಲಾ ಕಾರ್ಖಾನೆಗಳನ್ನು ಬಿಟ್ಟುಹೋಗಬೇಕೆಂದು ಬ್ರಿಟಿಷರು ಎಚ್ಚರಿಕೆ ಕೊಟ್ಟಿರುವರು. ಆ ಕಾರ್ಖಾನೆಗಳ ಮೇಲೆ ಭಾರಿ ಧಾಳಿ ಮಾಡುವರಂತೆ, ಇದೇ ತರಹ ಎಚ್ಚರಿಕೆಯನ್ನು ಫ್ರಾನ್ಸಿನವರಿಗೂ ಇಟಲಿಯವರಿಗೂ ಕೊಟ್ಟಿದ್ದರೂ ಅವರು ಕೇಳಲಿಲ್ಲ, ನಷ್ಟಪಟ್ಟರು,

ಂ ಂ

ಕಳೆದ ಭಾನುವಾರ ಸರ್ ಎಂ. ವಿಶ್ವೇಶ್ವರಯ್ಯನವರ ಬೊಂಬಾಯಿನಲ್ಲಿ ಮಾತನಾಡುತ್ತಾ, ಯುದ್ಧ ಮುಗಿದ ನಂತರ ಭಾರತದಲ್ಲಿ 5 ವರ್ಷ ಕಾಲದಲ್ಲಿ ಎಲ್ಲಾ ಕೈಗಾರಿಕೆಗಳನ್ನೂ ಸ್ಥಾಪಿಸಲು ಒಂದು ಸಾವಿರ ಕೋಟಿ ರೂಪಾಲಧನವು ಬೇಕಾಗುವುದೆಂದು ಹೇಳಿದರು.

ಶ್ರೀಮನ್ಮಹಾರಾಜರವರ ಟೀ ಪಾರ್ಟಿ

(ಸ್ವಂ. ಸು.) ಬೆಂಗಳೂರು ಜೂನ್ 21

ಶ್ರೀಮನ್ಮಹಾರಾಜರವರು ಇವತ್ತು ರಾತ್ರಿ ಅರಮನೆಯಲ್ಲಿ ನ್ಯಾಯವಿಧಾಯಕ ಸಭೆಯ ಸದಸ್ಯರಿಗೂ, ಸರಕಾರದ ಅಧಿಕಾರಿಗಳಿಗೂ, ವೃತ್ತಪತ್ರಿಕಾ ಪ್ರತಿನಿಧಿಗಳಿಗೂ ಟೀ ಪಾರ್ಟಿಯನ್ನು ಸಾಯಂಕಾಲ ಏರ್ಪಡಿಸಿದರು ಅತಿಥಿಗಳಿಗೆ ಸುಖಾಗಮನವನ್ನು ಅರಮನೆ ಅಧಿಕಾರಿಗಳು ಬಯಸಿದರು. ಬ್ಯಾಂಡು ನಡೆಯಿತು.

ಬಟ್ಟೇ ಗೋಳು ತಪ್ಪೀತೆ ?

ಅನೇಕರು ಒಬ್ಬೀಧಾರಣೆ ಇನ್ನೇನು ಕಮ್ಮಿಯಾಗುವುದೆಂದು ಚಾತಕಪಕ್ಷಿಯಂತೆ ಕಾದಿರುವರು. ಈಗ ಭಾರತದಲ್ಲಿರುವ ಸರಕು 400 ರಿಂದ 1000 ಮಿಲಿಯ ದಜ ಸಾಲದಹಾಗಿದೆ. ಸರಕಾರದವರು ಪರದೇಶಕ್ಕೆ ರಫ್ತು ಮಾಡುವದನ್ನು ಬಿಟ್ಟರೆ ಈಗಿನ ಧಾರಣೆಯಲ್ಲಿ ಶೇಕರ 30 ರಂತೆ ಧಾರಣೆ ಇಳಿಯಬಹುದೆಂದು ಮಿಲ್ ಯಜಮಾನರು ಹೇಳುವರು.

ತಯಾರಿಕೆ ಕಮ್ಮಿಯಾಯಿತು

ಮೇ ತಿಂಗಳಲ್ಲಿ ತಯಾರಾದ ಯುದ್ಧೋದ್ಯಮ ಸಾಮಗ್ರಿಗಳು ಏಪ್ರಿಲ್‌ಗಿಂತ ಶೇಕಡ ಐದಾನವೆಯಷ್ಟು ಕಮ್ಮಿಯಾಗಿದೆಯೆಂದು ಅಮೇರಿಕಾ ಸರಕಾರದ ಹೇಳಿಕೆ. ವಿನಾಶಕಾರಿಯಾದ ಮಾತ್ರ ಚೆನ್ನಾಗಿದೆಯಂತೆ ವಿಕ್ರಗ ಟಸಿಯಾ ಮತ್ತಿತರ ಭಾಗಗಳಲ್ಲಿ ಜಯಸ್ಪದ ಖುಷಿಯೇ ಇದಕ್ಕೆ ಕಾರಣ.

New Opera Talkies — Aryamala

ಪಿ. ಯು. ಚಿನ್ನಪ್ಪ, ಸರೋಜಿನಿ, ಸಂತಾನಲಕ್ಷ್ಮಿ, ಶಕುಂತಲ, ಕೃಷ್ಣ, ಮಧುರಂ ಮುಂತಾದವರು ಪಾತ್ರವಹಿಸಿರುವರು

ಅಪೆರಾ — 6th Week

ಆರ್ಯಮಾಲಾ ನೇವಾರ

ಟ್ರಕ್‌ದ್ವೀಪದ ಮಹತ್ವ.

——

ಗ್ವಾಡಲ್‌ಕೆನಲ್‌ನಿಂದ ಟೋಕಿಯೋಗೆ ಒಂದು ನೇರವಾದ ಗೆರೆ ಎಳೆದುನೋಡಿ ದರೆ ಮಧ್ಯೆ ಒಂದು ಸಣ್ಣ ದ್ವೀಪವಿದೆ ಇದರ ಹೆಸರು ಟ್ರಕ್, ಇದು ಟೋಕಿಯೋನಿಂದ 1300 ಮೈಲಿ ದೂರದಲ್ಲಿ ಅಂದರೆ ಸಾಲೋಮನ್ಸ್‌ನಿಂದ 1300 ಮೈಲಿ ದೂರದಲ್ಲಿದೆ. ಈ ದ್ವೀಪದಲ್ಲಿ ಬಹಳ ಪರ್ವತದಿಂದ ಯಾವ ಬೇರೆ ಮನುಷ್ಯನನ್ನೂ ಕಾಲಿಡಲು ಬಿಡಲಿಲ್ಲ. ಈ ದ್ವೀಪದ ವಿಷಯದಲ್ಲಿ ಜಪಾನಿಯರು ತಮ್ಮ ಶಕ್ತಿಯನ್ನು ಹೆಚ್ಚಾಗಿ ಕೇಂದ್ರೀಕರಿಸಿರುವರು. ಪೆರಲ್‌ಹಾರಬರ್‌ಗೆ ಸನ್ನಾಹದಂತಾ ಒಂದು ಬಂದರನ್ನು ಕಟ್ಟಿರುತ್ತಾರೆ. ಅಮೇರಿಕಾದ ಪೆರಲ್‌ಹಾರಬರ್‌ನ್ನು ಯಾರಾದರೂ ನೋಡಬಹುದು. ಈ ಟ್ರಕ್‌ದ್ವೀಪದ ವಿಷಯ ಯಾರಿಗೂ ತಿಳಿಯದು. ಬಹಳ ರಹಸ್ಯವಾಗಿ ಜಪಾನಿಯರು ಈ ದ್ವೀಪದಲ್ಲಿ ಬಂದರನ್ನು ನಿರ್ಮಾಣಮಾಡಿದರು. ಸಾವಿರಾರು ಮೈಲಿ ದೂರದಿಂದ ಅಂದರೆ ಟೋಕಿಯೋದಿಂದ ಸಾಲು ಸಾಲಾಗಿ ಹಡಗುಗಳಲ್ಲಿ ಗುಂಡು ಮುಂತಾದ ಸಾಮಾನುಗಳನ್ನು ತಂದರು ಇದು ಹಿಂದೆ ಜರ್ಮನಿಗೆ ಸೇರಿದ್ದು. 1914 ನೇ ಯುದ್ಧದಲ್ಲಿ ಇವರ ಪಾಲಿಗೆ ಬಂತು ಇಲ್ಲಿ ಕೋಟೆ, ಕೊತ್ತಲುಗಳನ್ನು ಕಟ್ಟಬಾರದೆಂದು ಒಪ್ಪಂದವಿದ್ದರೂ ಇದನ್ನು ಗಮನಿಸಲಿಲ್ಲ ಈಗ ಇಲ್ಲಿ ತಮ್ಮ ಎಲ್ಲಾ ಸೌಕರ್ಯಗಳನ್ನು ಒಟ್ಟುಗೂಡಿಸಿ ನಿಲ್ದಾಣವಾಗಿ ಅನುಕೂಲಮಾಡಿರುತ್ತಾರೆ ಹಡಗುಗಳು ತಂಗಲು ಭಾರಿ ನಿಲ್ದಾಣಗಳಿವೆ. ದೊಡ್ಡ ದೊಡ್ಡ ವಿಮಾನಗಳ ನಿಲ್ದಾಣಗಳಿವೆ. ಅಲ್ಲಿ 14 ಇಂಚು 16 ಇಂಚು ಗುಂಡುಗಳನ್ನು ನೆಟ್ಟಿರುತ್ತಾರೆ ಇವುಗಳಿಂದ ಹೆಲ್ಲುಗಳನ್ನು 25 ಮೈಲಿ ದೂರ ಕಾರಬಹುದು. ಒಂದು ಸಬ್‌ಮೆರಿನ್ ನಿಲ್ದಾಣವಲ್ಲದೆ ಹಡಗುಗಳ ರಿಪೇರಿಮಾಡುವ ಎರಡು ಭಾರಿ ಡಾಕ್‌ಗಳಿವೆ. ಈ ಕಾಲದಲ್ಲಿ ಬ್ರಿಟಿಷರು ಸಿಂಗಪೂರಿನಲ್ಲಿ ಕೋಟ್ಯಾನುಕೋಟಿ ದ್ರವ್ಯ ಸುರಿದು ಕಟ್ಟಿದ ದೇವು ಪ್ರಪಂಚ

ಲೆ. ಡಿ। ಕರ್ಜನ್ನರ ಮನೋನ್ಮಾಧಿ

1898 ರಿಂದ 1905 ರವರೆಗೆ ಹಿಂದೂ ದೇಶದ ಗೌರ್ನರ್ ಜನರಲ್ಲಾಗಿದ್ದ ಬಂಗಾಳ ರಾಷ್ಟ್ರದ ವಿಭಜನೆ ಮಾಡಿದವರೆಂದೇ ಮಾತರಂ ಉಚ್ಚಾರಣೆಗೆ ಕಾರಣರಾದ ಕರ್ಜನ್‌ರವರು ಬಹಳ ಬುದ್ಧಿವಂತರು, ನಿರಂಕುಶರು. ಇವರ ಪತ್ನಿಯವರೋ ಬಹಳ ದಯಾಹೃದಯಳು. ಆಕೆಯು ದಾನಧರ್ಮಗಳನ್ನು ಮಾಡಿ ಪ್ರಜೆಗಳ ಅನುರಾಗಕ್ಕೆ ಪಾತ್ರಳಾದಳು, ಆಕೆಗೆ ಅಸ್ವಸ್ಥವಾದಾಗ ಅನೇಕ ದೇವಾಲಯಗಳಲ್ಲಿಯೂ ಮಸೀದಿಗಳಲ್ಲಿಯೂ ಆಕೆಗೆ ಆರೋಗ್ಯವಾಗಲೆಂದು ಪ್ರಾರ್ಥನೆಗಳು ನಡೆದವು

ತನ್ನ ಪತಿಯು ಅನೇಕಾನೇಕ ರಾಜರ ಮನಸ್ಸುಗಳಿಗೆ ಬಾಧೆಯನ್ನು ಬಿಟ್ಟು ಮಹತ್ತಾದ ಅತಿ ವೈಭವದೊಡನೆ ದೆಲ್ಲಿ ದರ್ಬಾರನ್ನು ನಡೆಸುತ್ತಿದ್ದುದಕ್ಕೆ ಆಕೆಯು ಬಾಧೆಪಡುತ್ತಾ, ಅದು ನಡೆಯುತ್ತಿದ್ದ ಕಾಲವೆಲ್ಲಾ ಪ್ರತಿ ರಾತ್ರಿಯೂ ಬಹಳ ದುಃಖಪಡುತ್ತಿದ್ದಳಂತೆ. ತನ್ನ ಪತಿಯು ಪ್ರಜೆಗಳ ಅನುರಾಗಕ್ಕೆ ಪಾತ್ರನಾಗದಿರುವಿಕೆಯು ಕೂಡ ಆಕೆಯ ಮನೋವ್ಯಥೆಗೆ ಕಾರಣವಾಗಿತ್ತಂತೆ ಈ ಮನೋವ್ಯಥೆಯೇ ಆಕೆಯ ಅಕಾಲ ಮರಣಕ್ಕೆ ಕಾರಣವಾಯಿತಂತೆ.— ಹೀಗೆಂದು ಚಾರ್ಚಿಲ್ ಎಂಬುವನು 1908 ರಲ್ಲಿ ಬರೆದಿರುವನು.

(ಟಿಂ)

ಕ್ಕೆ ತಿಳಿಯಿತು. ಟ್ರಕ್‌ನಲ್ಲಿ ಜಪಾನಿಯರು ಕಟ್ಟಿದ್ದು ಇದುವರೆಗೂ ಯಾರಿಗೂ ತಿಳಿಯದು. ಈಗ ಮಿತ್ರರ ಕೇಂದ್ರಸ್ಥಳ ಗ್ವಾಡಲ್‌ಕೆನಾಲ್. ಇದು ಸಾಲಮನ್‌ನಿಂದ 1300 ಮೈಲಿ ದೂರದಲ್ಲಿದೆ. ಇಷ್ಟುದೂರದಿಂದ ವಿಮಾನಧಾಳಿ ಮಾಡುವುದು ಕಷ್ಟ.

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ನ್ಯಾಯವಿಧಾಯಕ ಸಭೆ

(ನಮ್ಮ ಸ್ವಂತ ಸುದ್ದಿಗಾರರಿಂದ)

ಬೆಂಗಳೂರು ಜೂ॥ 21

ಪುನರ್ರಚನೆಯಾದ ನ್ಯಾಯವಿಧಾಯಕ ಸಭೆಯ, ಅಯವ್ಯಯದ ವಿಚಾರವಾದ 5 ನೇ ಅಧಿವೇಶನವು ಮಧ್ಯಾಹ್ನ 1 ಗಂಟೆಗೆ ನ್ಯಾಯವಿಧಾಯಕ ಸಭಾಮಂದಿರದಲ್ಲಿ ಶ್ರೀ ಡಿ. ಹೆಚ್. ಚಾಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ಹೊಸ ಸದಸ್ಯರು ರಾಜಭಕ್ತಿ ಪ್ರಮಾಣ ವಚನವನ್ನು ಸಭೆಯಲ್ಲಿ ಉಚ್ಚರಿಸಿದರು.

ರಾಜಮಂತ್ರಪ್ರವೀಣ ಶ್ರೀ ಅನಂತರಾಮ್‌ರವರು, ಈ ಸಭೆಯ ಸದಸ್ಯರಾಗಿದ್ದು ಗತಿಸಿದ ಡಾ॥ ಡಿ ಸೌಜರ ಮರಣದ ಬಗ್ಗೆ ನಾವೆಲ್ಲಾ ದುಃಖಿಸುತ್ತೇವೆ, ಮತ್ತು ಈ ಸಭೆಯು ಸೂಚನೆಯನ್ನು ಅವರ ಕುಟುಂಬಕ್ಕೆ ತಲಪಿಸಬೇಕೆಂದು ಕೋರುತ್ತೇನೆಂದರು. ಸಭೆಯು ಮೌನವನ್ನು ತಾಳಿ ಎದ್ದುನಿಂತು ಸಂತಾಪ ಸೂಚನೆಯನ್ನು ಅನುಮೋದಿಸಿತು.

ನ್ಯಾಯವಿಧಾಯಕ ಸಭೆಯ ಕಾರ್ಯದರ್ಶಿಗಳು ಶ್ರೀಮನ್ಮಹಾರಾಜರಿಂದ ಅಂಗೀಕೃತವಾದ ಬಿಲ್ಲುಗಳನ್ನೆಲ್ಲಾ ಓದಿದರು.

ನಂತರ ಪ್ರಶ್ನೋತ್ತರಗಳು ನಡೆದವು.

ಶ್ರೀ ಬೇಲೂರು ಶ್ರೀನಿವಾಸಯ್ಯಂಗಾರ್ಯರ— ಭಾರತ ರಕ್ಷಣಾ ಶಾಸನದ 26 ನೇ ನಿಬಂಧನೆಯ ಪ್ರಕಾರ ಸಂಸ್ಥಾನಾವಳಿ ಬಂಧಿತರಾಗಿರುವ ರಾಜಕೀಯ ಬಂಧಿತರ ಸಂಖ್ಯೆ ಎಷ್ಟು? ಫೆಡರಲ್ ಕೋರ್ಟು ತೀರ್ಪಿನ ದೃಷ್ಟಿಯು ರೀತ್ಯಾ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ? ಇಲ್ಲವೆಂದರೆ ಕಾರಣವೇನು?

ಉತ್ತರ— 1415 ಬಂಧಿತರು; ಇಲ್ಲ. ಅವಶ್ಯಕವೆಂದು ಕಂಡ ಬಂಧಿಸಲ್ಲ: ಇಲ್ಲ.

ಶ್ರೀ ರಾಜರಾಂರವರು ಇನ್ನು ೧೨॥ ಘಂಟೆಗೆ ಕೆಲವು ಅವಸರದ ತರಾವುಗಳನ್ನು ಚರ್ಚೆಯ ಬಗ್ಗೆ ಒಪ್ಪಿಸಿದರು ಅವು ನ್ಯಾಯ ರೀತ್ಯಾ ಸಭೆ ಸೇರುವುದಕ್ಕೆ ಮುಂಚೆ ಒಪ್ಪಿಸಬೇಕು, ಆದ್ದರಿಂದ ನಾಳೆಗೆ ಮುಂದುವರಿಸಿದೆ ಎಂದು ಅಧ್ಯಕ್ಷರು ತಿಳಿಸಿದರು.

ತಾ॥ 23, 24 ಸಂಜೆ 4 ರಿಂದ 6 ರವರೆಗೆ ಪ್ರಿಸಿಲೇಜನ್ ಮತ್ತು ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಸದಸ್ಯರನ್ನು ಆರಿಸುವುದಕ್ಕೆ ಉಪ ಕಾರ್ಯದರ್ಶಿಗಳ ಕಛೇರಿಯಲ್ಲಿ ವಿಚಾರಿಸು ಮಾಡಿದೆ ಎಂದು ಅಧ್ಯಕ್ಷರು ಹೇಳಿದರು.

ಆರ್ಥಿಕ ಕಾರ್ಯದರ್ಶಿಗಳಾದ ಶ್ರೀ ವೀರರಾಜೆ ಅರಸಿನವರು ಆಯವ್ಯಯದ ವಿಚಾರ ಮುಂತಾದ ವಿವರಣೆಗಳ ತಮ್ಮ ಭಾಷಣವನ್ನು ಸಭೆಯಮುಂದೋದಿದರು.

ಶ್ರೀ ಅನಂತರಾಮ್‌ರವರು, ವೈಶೂರು ಬಂದೀಖಾನೆ ಜಿಲ್ಲೆ. ಮಕ್ಕಳ ಬಿಲ್ ಮುಂತಾದವನ್ನೂ, ಶ್ರೀ ಗುಂಡಪ್ಪನವರು ಪೌರಸಭೆ, ವೈದ್ಯದ ಬಿಲ್ಲುಗಳನ್ನೂ, ಶ್ರೀ ಶ್ರೀನಿವಾಸರಾಯರವರು ರಬ್ಬರ್ ಸಂಬಂಧದ ಬಿಲ್ಲನ್ನೂ, ಮತ್ತು ಶ್ರೀ ಅಪ್ಪಾಜಿಗೌಡರು ವಾರ್ವಿಸ್ಕ್ ಬಿಲ್ಲನ್ನೂ ಸಭೆಯ ಒಪ್ಪಿಗೆಗೆ ಒಪ್ಪಿಸಿದರು.

ಸಭೆಯು 4 ಗಂಟೆಗೆ ಉಪಹಾರಕ್ಕೆ ಮುಂದುವರಿಸಲ್ಪಟ್ಟು, ನಂತರ ನಾಳೆಗೆ ಮುಂದುವರಿಸಲ್ಪಟ್ಟಿತು.

Ranjit — — Satyabhama

ರಣಜಿತ್ ಟಾಕೀಸ್

3rd Week

ವೈ ವಿ ರಾವ್, ಪುಷ್ಪವಲ್ಲಿ ಪಾತ್ರವಹಿಸಿರುವ

ಸತ್ಯಭಾಮಾ [ತೆಲುಗು]

ತುರಿಸುಧಾ

ಸೇವನೆಯಿಂದ ರಕ್ತಕೊರತೆ, ಮಲಬಂಧ, ನರಗಳ ಅಶಕ್ತತೆ, ದೌರ್ಬಲ್ಯ, ನಿದ್ರಾಭಂಗ ನಿವಾರಣೆಯಾಗಿ, ಸಂಸಾರಸುಖಕ್ಕೆ ಅಪರಿಮಿತ ಶಕ್ತಿ ಲಭಿಸುವದೂ

ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ. / ಬೆಲೆ 1 ರೂಪಾಯಿ.